<u>ಸಾಕ್ಷಿಯನ್ನು ದಿ:18.10.2021 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಶ್ರೀ ಆರ್.ಜಿ ವಕೀಲರಿಂದ:</u>

ನಾನು 10 ನೇ ತರಗತಿ ಹೋಗಿರುತ್ತದೆ. ಪ್ರತಿವಾದಿ ನನ್ನ ಮಾವ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಬಾಮೈದ ಎಂದರೆ ಸರಿ. ನಾನು 1 ನೇ ವಾದಿಯನ್ನು ಪ್ರೀತಿಸಿ ಪ್ರತಿವಾದಿಗಳ ಒಪ್ಪಿಗೆ ಇಲ್ಲದೇ ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಪ್ರೀತಿಸಿ ಮದುವೆಯಾಗಿದ್ದೇನೆ ಆದರೇ ಮದುವೆಯನ್ನು ಪ್ರತಿವಾದಿಗಳೇ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಮ್ಮ ಮದುವೆಗೆ ನನ್ನ ತಂದೆ ತಾಯಿಗಳು ಬಂದಿರಲಿಲ್ಲ ಎಂದರೆ ಸರಿ. ನಾನು ಮತ್ತು 1 ನೇ ವಾದಿ ಮದುವೆ ಯಾದ ನಂತರ ಪ್ರತಿವಾದಿಗಳ ಮನೆಯಲ್ಲಿ ಸುಮಾರು 10 ವರ್ಷಗಳ ಕಾಲ ವಾಸವಾಗಿದ್ದೇವು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಗಳು ನಮಗೆ ಉಚಿತವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಅದನ್ನು ದುಡ್ಡು ಕೊಟ್ಟು ಖರೀದಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ-1 ಆಗುವ ಸಮಯಕ್ಕೆ ನಾನು ನಮ್ಮ ತಂದೆ ಉತ್ತಮ ಭಾಂದವ್ಯ ಹೊಂದಿದ್ದೇವು ಎಂದರೆ ಸರಿಯಲ್ಲ. 1 ನೇ ವಾದಿ 1 ನೇ ಪ್ರತಿವಾದಿ ಪರವಾಗಿ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಪ್ರತಿವಾದಿಗಳು ತೊಂದರೆ ಮಾಡುತ್ತಿಲ್ಲ ಬರೀ ದಾರಿಗೆ ಸಂಬಂದಿಸಿದಂತೆ ನಮ್ಮ ನಡುವೆ ವಿವಾದ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ 1 ನೇ ಪ್ರತಿವಾದಿಯ ಸ್ವತ್ತು.

ಪಶ್ಚಿಮಕ್ಕೆ ಓಣಿ ರಸ್ತೆ, ಉತ್ತರಕ್ಕೆ ವೆಂಕಟರಾಮಯ್ಯ, ದಕ್ಷಿಣಕ್ಕೆ 12 ಅಡಿ ರಸ್ತೆ. ದಾವಾ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 50 ಅಡಿ, ಉತ್ತರ ದಕ್ಷಿಣ 36 ಅಡಿ ಬರುತ್ತದೆ. ದಾವಾ ಸ್ವತ್ತು ಮತ್ತು ದಕ್ಷಿಣ ದಿಕ್ಕಿಗೆ ಬರುವ 12 ಅಡಿ ರಸ್ತೆಯನ್ನು ಹೊರೆತುಪಡಿಸಿ ಉಳಿದ ಸ್ವತ್ತುಗಳಿಗೂ ನಮಗೂ ಯಾವುದೇ ಸಂಭಂದ ಇಲ್ಲ ಎಂದರೆ ಸಾಕ್ಷಿಯು ಉಳಿಕೆ ಯಾವುದೇ ಸ್ವತ್ತು ಇಲ್ಲ ಎಂದು ನುಡಿದಿರುತ್ತಾರೆ. ದಕ್ಷಿಣ ದಿಕ್ಕಿಗೆ ಇರುವ 12 ಅಡಿ ನಂತರ ನಮ್ಮ ಮನೆ ಪ್ರಾರಾಂಭವಾಗುತ್ತದೆ ಎಂದರೆ ಸರಿ. ಈಗ ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ಎಡಗಡೆ ಭಾದಲ್ಲಿ ಕಾಣುವ ಚಪ್ಪಡಿ ಕಲ್ಲು ಹಾಕಿರುವ ಭಾಗವೇ ದಕ್ಷಿಣಕ್ಕೆ ಇರುವ ರಸ್ತೆಯಾಗಿದ್ದು ಅದನ್ನು ಕಲ್ಲುಗಳಿಂದ ಮುಚ್ಚಲಾಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದು ಸದರಿ ಛಾಯಾ ಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿ ಅದರ ಮಧ್ಯ ಭಾಗದಲ್ಲಿ ಕಾಣುವ ದಾರಿ ತಕರಾರು ಇರುವ ರಸ್ತೆ ಎಂದು ಕೇಳಲಾಗಿ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದು ಸದರಿ ಛಾಯಾ ಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುವ ರಸ್ತೆ ಈಗ ತಕಾರಾರಿಗೆ ಒಳಪಟ್ಟಿರುವ ರಸ್ತೆಯಾಗಿದ್ದು ನಾವು ಮತ್ತು ಪ್ರತಿವಾದಿಗಳು ಓಡಾಡಲು ಬಿಟ್ಟಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದುಸದರಿ ಛಾಯಾ ಚಿತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ರಸ್ತೆ ಸುಮಾರು 12 ಅಡಿ ಇರುತ್ತದೆ. ನಾವು

ನಮ್ಮ ಮನೆಯನ್ನು ಉತ್ತರ ದಕ್ಷಿಣ ದಿಕ್ಕಿಗೆ 30 ಅಡಿಗಳವರೆಗೆ ಮತ್ತು ಪೂರ್ವ ಪಶ್ಚಿಮ 46 ಅಡಿಗಳವರೆಗೆ ಕಟ್ಟಿಕೊಂಡಿರುತ್ತೇವೆ. ನಿಡಿ-3 ರಲ್ಲಿ ಕಾಣುವ ರಸ್ತೆ 18 ಅಡಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 6 ಅಡಿ ಜಾಗವನ್ನು 1 ನೇ ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವಿಚಾರ ನನಗೆ 1 ನೇ ಪ್ರತಿವಾದಿಯ ಅಣ್ಣ ಸರ್ವೇ ಮಾಡಿಸಿದಾಗ ತಿಳಿದುಬಂದಿರುತ್ತದೆ. ನಿಡಿ-3 ರಲ್ಲಿ ಕಾಣುವ 6 ಅಡಿ ಹೆಚ್ಚುವರಿ ಜಾಗ ನಾನು ಬಿಟ್ಟುಕೊಂಡಿರುವ ಖಾಲಿ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ನಾರಾಯಣಪ್ಪರವರಿಗೆ ಸೇರಿದ ಖಾಲಿ ಜಾಗ ಎಂದು ನುಡಿದಿರುತ್ತಾರೆ ನಮ್ಮ ಮನೆಯ ಉತ್ತರಕ್ಕೆ ದಾರಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾರಿ 12 ಅಡಿ ಇರುತ್ತದೆ ಎಂದರೆ ಸಾಕ್ಷಿಯು 6 ಅಡಿ ಎಂದು ನುಡಿದಿರುತ್ತಾರೆ. ನಿಡಿ-2 ರ ಮುಖಾಂತರವೇ ಪ್ರತಿವಾದಿಗಳು ಓಡಾಡುತ್ತಾರೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಪೂರ್ವ ದಿಕ್ಕಿಗೆ ಪ್ರತಿವಾದಿಗಳು ಪೂರ್ವ ಪಶ್ಚಿಮ 8 ಅಡಿ ಉತ್ತರ ದಕ್ಷಿಣ 50 ಅಡಿ ಖಾಲಿ ಜಾಗವನ್ನು ನಮಗೆ ಬಿಟ್ಟು ಅವರ ಸ್ವತ್ತಿಗೆ ಕಾಪೌಂಡ್ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಾಣುವ ಮನೆಯು ನಿಮ್ಮದಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಸದರಿ ಮನೆಯು 10 ವರ್ಷಗಳಿಂದ ಆಗೇ ಇರುತ್ತದೆ ಎಂದರೆ ಸರಿ. ಸದರಿ ಮನೆಯಲ್ಲಿ ಯಾರು ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಂದು ಛಾಯಾ

ನಮ್ಮ ಮನೆಯನ್ನು ಉತ್ತರ ದಕ್ಷಿಣ ದಿಕ್ಕಿಗೆ 30 ಅಡಿಗಳವರೆಗೆ ಮತ್ತು ಚಿತ್ರವನ್ನು ತೋರಿಸಲಾಗಿ ಅಲ್ಲಿ ಕಾಣುವ ಮರದ ಗೇಟು ಪ್ರತಿವಾದಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಅವರ ಜಾಗಕ್ಕೆ ಅವರು ಹಾಕಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿಡಿ-5 ಎಂದು ಗುರುತಿಸಲಾಯಿತು. ನಾನು ನಿಡಿ-4 ರಲಿ ಕಾಣುವ ಮನೆಯಲ್ಲಿ ವಾಸವಾಗಿಲ್ಲದಿದ್ದರು ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿಗಳು ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಇರುವ ಖಾಲಿ ಜಾಗದಲ್ಲಿ ಓಡಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರು ನಮ್ಮ ಜಾಗದಲ್ಲಿ ಓಡಾಡಬಾರದು ಎಂದು ನುಡಿದಿರುತ್ತಾರೆ. ನಿಪಿ-1 ನ್ನು ನನ್ನ ತಂದೆಯೇ ತಯಾರು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಗಳು 1 ನೇ ವಾದಿಗೆ ಉಚಿತವಾಗಿ ನೀಡಿದ್ದು, ನಾವು ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಾವು ಉದ್ದೇಶಪೂರ್ವಕವಾಗಿ ಉತ್ತರ ದಿಕ್ಕಿಗೆ ವೆಂಕಟರಾಮಯ್ಯ ಸ್ವತ್ತು ಬರುತ್ತದೆ ಎಂದು ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ವಾದಿಯು ಸಾಕ್ಷಿ ಮಾಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. 1 ನೇ ವಾದಿ ಸಾಕ್ಷಿ ವಿಚಾರಣೆ ಮಾಡಿಸಿದರೇ ಸಾತ್ಯಾಂಶ ಹೊರ ಬರುತ್ತದೆ ಎಂಬ ಕಾರಣಕ್ಕೆ ನಾನು ಸಾಕ್ಷಿಯನ್ನು ವಿಚಾರ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಾಲೆ ಸೃಷ್ಟಿಸಿ ಸುಳ್ಳು ಪ್ರಕರಣ ದಾಖಾಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**

(ದೀಪು ಬಿ.ಸಿ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಬಂಗಾರಪೇಟೆ.